International Journal of Kannada Research 2018; 4(1): 80-83

International Journal of Kannada Research
www.kannadajournal.com

ISSN: 2454–5813
IJKR 2018; 4(1): 80-83
© 2018 IJKR
www.kannadajournal.com
Received: 16-11-2017
Accepted: 17-12-2017

**ಶ್ರೀನಿವಾಸ ದೊಡ್ಡಮನಿ**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ, ಕ.ವಿ.ವಿ.
ಧಾರವಾಡ

**Correspondence**
**ಶ್ರೀನಿವಾಸ ದೊಡ್ಡಮನಿ**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ
ಅಧ್ಯಯನ ಪೀಠ, ಕ.ವಿ.ವಿ.
ಧಾರವಾಡ

# ಡಾ. ಮಲ್ಲಿಕಾ ಘಂಟಿಯವರ ನಾಟಕ ಸಾಹಿತ್ಯಕ್ಕೆ ನೀಡಿದ ಕೊಡುಗೆ

**ಶ್ರೀನಿವಾಸ ದೊಡ್ಡಮನಿ**

ಡಾ. ಮಲ್ಲಿಕಾ ಘಂಟಿಯವರು ಮೂಲತಃ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಅಗಸಬಾಳ ಗ್ರಾಮದವರು. ಪಿಎಚ್.ಡಿ ಪದವಿಧರರಾದ ಇವರು ಮಹಿಳಾ ಸಾಹಿತಿಗಳಲ್ಲಿ ಒಬ್ಬರು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು. ಇವರ ಸಾಹಿತ್ಯ ಕೃಷಿಯಲ್ಲಿ ಮೂಡಿ ಬಂದ ಕೃತಿಗಳಲ್ಲಿ ಸೃಜನಸಾಹಿತ್ಯ, ಜೀವನ ಚರಿತ್ರೆಗಳು, ಸಂಪಾದನಾ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳಿವೆ. ಸೃಜನ ಸಾಹಿತ್ಯಗಳೆಂದರೆ; ಕನ್ನಡ ಕಥೆಗಾರ್ತಿಯರು (೧೯೮೦), ತನುಕರಗದವರಲ್ಲಿ (೨೦೦೦), ಧರಣಿಯ ಮೇಲೊಂದು (೨೦೦೦), ಭುವನಕ್ಕೆ ಬೆಲೆಯಲ್ಲಿ (೨೦೧೧), ಒಳಗೆ ಸತ್ತು ಹೊರಗೆ (೨೦೧೧) ವಿಮರ್ಶಾ ಸಂಕಲನಗಳಾದರೆ, ಹೆಣ್ಣುಗಳೇ ಹೀಗೆ (೧೯೮೮), ರೊಟ್ಟಿ ಮತ್ತು ಹುಡುಗಿ (೨೦೦೦), ಬೆಲ್ಲದಚ್ಚಚ್ಚು ಮತ್ತು ಇರುವೆ (೨೦೦೧) ಕವನಸಂಕಲನಗಳಾಗಿವೆ. ಚಾಜ (೧೯೮೯) ಮತ್ತು ಒಂದು ಬಾವಿಯ ಸುತ್ತ (೧೯೯೦) ಎರಡು ನಾಟಕಗಳಿವೆ. ಅಹಲ್ಯಬಾಯಿ ಹೊಲ್ಕರ (೧೯೯೦), ಇಟಗಿ ಭೀಮಾಂಬಿಕೆ (೨೦೦೯), ಸಂಗೋಳ್ಳಿ ರಾಯಣ್ಣ (೨೦೦೯) ಜೀವನ ಚರಿತ್ರಾ ಕೃತಿಗಳಾಗಿವೆ. ಇವರು ಸಂಪಾದಿಸಿದ ಪ್ರಮುಖ ಕೃತಿಗಳೆಂದರೆ; ಸೊಲ್ಲು (೨೦೦೮), ತನುವ ನೇಗಿಲ ಮಾಡಿ (೨೦೦೮), ಮುಟ್ಟು ಬಂದಿದೆ ಕೆರೆಗೆ (೨೦೦೮), ನಮ್ಮ ಕಣ್ಣಲ್ಲಿ ನೀವು (೨೦೦೮), ದಲಿತ ಸಾಹಿತ್ಯ ಹಾಗೂ ಚಳುವಳಿ (೨೦೦೮), ಮಹಿಳಾ ಸಾಹಿತ್ಯ (೨೦೦೮), ಮಹಿಳಾ ಸಂಸ್ಕೃತಿ ಮಾಲಿಕೆ (೨೦೦೮), ಅನಿಕೇತನ (೨೦೦೮), ನುಡಿ ಸೊಬಗು (೨೦೧೧), ನುಡಿವ ಬೆಡಗು (೨೦೧೧) ಇತ್ಯಾದಿಗಳು. ಹಾಲು ಮತಕ್ಕೆ ಸಂಬಂಧಿಸಿದಂತೆ ವಿಶೇಷ ಸಂಚಿಕೆಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ ಕನಕದಾಸರು (೨೦೦೮), ಕಾಳಿದಾಸ (೨೦೦೮), ಸಜ್ಜಲ ಗುಡ್ಡದ ಶರಣಮ್ಮ (೨೦೦೮), ಬೊಮ್ಮಗೊಂಡೇಶ್ವರ (೨೦೦೮), ಜ್ಯೋತಿ ಬಾಫುಲೆ (೨೦೦೮), ಮಾಲಿಂಗರಾಯ (೨೦೦೮), ಬೀರಪ್ಪ (೨೦೦೮) ಮೊಲಾದ ಕೃತಿಗಳಿವೆ. ಇವರ ಸಾಹಿತ್ಯಿಕ ಸೇವೆಯನ್ನು ಗುರುತಿಸಿ ಕನಾಟಕ ಸರ್ಕಾರವು ೧೯೯೦ ಮತ್ತು ೨೦೦೦ ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಸಸ್ತಿಯನ್ನು ನೀಡಿ ಗೌರವಿಸಿದೆ. ಅಲ್ಲದೆ 'ತನುಕರಗದವರಲ್ಲಿ' ಕೃತಿಗೆ ಕಾವ್ಯಾನಂದ ಪ್ರಶಸ್ತಿ, ಸುಧಾಮೂರ್ತಿ ಪ್ರಶಸ್ತಿ, ರತ್ನಮ್ಮ ಹೆಗಡೆ ಪ್ರಶಸ್ತಿ, ವಿಶ್ವೇಶ್ವರಯ್ಯ ಪ್ರಶಸ್ತಿ, ಸಿಂಧೂರ ದತ್ತಿ ನುಡಿ ಪ್ರಶಸ್ತಿ, ಮಾತೋಶ್ರೀ ಮಾಣಿಕಬಾಯಿ ಪಾಟೀಲ ಪ್ರಶಸ್ತಿಗಳು ಬಂದಿವೆ. 'ರೊಟ್ಟಿ ಮತ್ತು ಹುಡುಗಿ' ಲಿಂಗರಾಜ ಪ್ರತಿಸ್ಥಾನ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿಗಳು ಸಂದಿವೆ. ಹೀಗೆ ಮಹಿಳಾ ಸಾಹಿತಿಗಳಾಗಿ, ನಾಟಕಗಾರ್ತಿಯಾಗಿ, ಬೋಧಕರಾಗಿ, ಮಾರ್ಗದರ್ಶಕರಾಗಿ, ಪ್ರಾಧ್ಯಾಪಕಿಯಾಗಿ, ಸಮಾಜ ಸೇವಕಿಯಾಗಿ, ಶಿವಮೊಗ್ಗ ವಿಶ್ವವಿದ್ಯಾಲಯದ ಕುಲಸಚಿವರಾಗಿ ಅನುಭವ ಹೊಂದಿದ ಇವರು ಪ್ರಸ್ತುತ ಹಂಪಿ ಕನ್ನಡ ವಿಶ್ವವಿದ್ಯಾಲಯದ ಮೊದಲ ಮಹಿಳಾ ಕುಲಪತಿಗಳಾಗಿ ಕಾರ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಚಾರವೇ ಸರಿ. ಆದರೆ ಪ್ರಸ್ತುತ ಲೇಖನವು ಡಾ. ಮಲ್ಲಿಕಾ ಘಂಟಿಯವರು ನಾಟಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಕುರಿತು ಪರಿಚಯಿಸುವ ಉದ್ದೇಶದ್ದಾಗಿದೆ. ಇವರು 'ಚಾಜ' ಮತ್ತು 'ಒಂದು ಬಾವಿಯ ಸುತ್ತ' ಎಂಬ ಎರಡು ನಾಟಕಗಳನ್ನು ರಚಿಸಿದ್ದು, ಅವುಗಳನ್ನಿಲ್ಲಿ ಒಂದೊಂದಾಗಿ ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ.

**ಚಾಜ**

ಡಾ. ಮಲ್ಲಿಕಾ ಘಂಟಿಯವರು ಒರ್ವ ದಿಟ್ಟ ಮಹಿಳಾ ಬಂಡಾಯ ಸಾಹಿತಿಗಳಾಗಿದ್ದು, ಹೋರಾಟದ ಮೂಲಕವೇ ಮೇಲೆ ಬಂದವರು. ಸ್ತ್ರೀವಾದಿ ಚಿಂತಕರೂ ಹೌದು. ಸಮಾಜದಲ್ಲಿ ಆಚರಣೆಗಳ ಮೂಲಕ ಮಹಿಳೆಯರನ್ನ ಹಿಂಸಿಸುತ್ತಿರುವ ಪದ್ಧತಿಗಳ ವಿರುದ್ಧ ನಡೆಯುವ ಕ್ರೌರ್ಯವನ್ನು ವಸ್ತುವನ್ನಾಗಿಸಿ, ರಚಿಸಿದ ನಾಟಕವೇ ಈ ಚಾಜ. ನಾಟಕ ಕ್ಷೇತ್ರಕ್ಕೆ ನೀಡಿದ ಮೊದಲ ಕೊಡುಗೆಯಿದು. ಡಾ. ವೀರಣ್ಣ

ರಾಜೂರ ಅವರು ಹೇಳುವಂತೆ "ಇದೊಂದು ದಲಿತ ಬಂಡಾಯ ಧೋರಣೆಗಳನ್ನು ಅಳವಡಿಸಿಕೊಂಡು ರಚಿವಾದ ಕೃತಿ. ಜಮೀನ್ದಾರಿ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯತ್ತ ವಾಲುತ್ತಿರುವ ಸಮಾಜದಲ್ಲಿ ನಡೆದ ಸಂಕ್ರಮಣಕಾಲದ ಸಂಘರ್ಷವನ್ನು ಎತ್ತಿ ತೋರಿಸುವುದು, ತನ್ಮೂಲಕ ಆಗಿನ ಸಂದರ್ಭದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನಲ್ಲಿ ನಡೆದ ಕುದಿತ, ಅದರಿಂದಾದ ಪರಿಣಾಮಗಳನ್ನು ಬಿಚ್ಚಿಡುವದು" ಈ ನಾಟಕದ ಮುಖ್ಯ ಉದ್ದೇಶವಾಗಿದೆ (ಮುನ್ನುಡಿಯಿಂದ). ಬಂಡಾಯದ ಸಾಹಿತಿಯಾಗಿರುವ ಡಾ. ಮಲ್ಲಿಕಾ ಘಂಟಿಯವರು ತಮ್ಮ ಮನೋಭಾವಕ್ಕೆ ಸೂಕ್ತವಾದ ನಾಟಕದ ವಸ್ತುವನ್ನೇ ಆಯ್ಕೆಮಾಡಿಕೊಂಡಿದ್ದಾರೆ.

'ಚಾಜ' ಎಂಬುದು ವಿಜಯಪುರ ಹಾಗೂ ಉತ್ತರ ಕರ್ನಾಟಕದಲ್ಲಿರುವ ಒಂದು ಆಚರಣೆ. ಜಮೀನ್ದಾರಿ ವ್ಯವಸ್ಥೆ ಹೊಂದಿರುವ ಹಳ್ಳಿಗಳಲ್ಲಿ ರೂಢಿಯಲ್ಲಿದ್ದ ಈ ಪದ್ಧತಿಯಿಂದ ಮಹಿಳೆಯ ಮೇಲೆ ನಡುತ್ತಿದ್ದ ಮಾನಸಿಕ ಹಿಂಸಾಚಾರವನ್ನು ಎತ್ತಿ ತೋರುತ್ತದೆ. ಡಾ. ಸಿದ್ದನಗೌಡ ಪಾಟೀಲ ಅವರು ಹೇಳುವಂತೆ "ಜಮೀನ್ದಾರಿ ವ್ಯವಸ್ಥೆಯಲ್ಲಿ ಮದುವೆಯ ನಂತರ ಮನೆಗೆ ಬರಬೇಕಾದ ಸೊಸೆ ಊರ ಗೌಡ ಅಥವಾ ದೇಸಾಯಿ ಮನೆಯಲ್ಲಿ ಅವನ ತೆಕ್ಕೆಯಲ್ಲಿ ಮೊದಲರಾತ್ರಿ ಕಳೆಯಬೇಕಾಗಿತ್ತು" (ಚಾಜ ನಾಟಕ ಪು.೩) ಎಂಬ ಮಾತು ಮಹಿಳೆಯರು ಬಹಿರಂಗವಾಗಿಯೇ ಅತ್ಯಾಚಾರಕ್ಕೆ ಆಚರಣೆಯ ಹೆಸರಿನಲ್ಲಿ ಬಲಿಯಾಗುತ್ತಿರುವುದನ್ನು ಸೂಚಿಸುತ್ತದೆ. ಇದರ ಪ್ರತಿಧ್ವನಿಯಾಗಿ ಹುಟ್ಟಿಕೊಂಡ ನಾಟಕವೇ ಇದು. ಸ್ತ್ರೀ ವಿಮೋಚನೆಯೇ ಈ ನಾಟಕದ ಜೀವಾಳ.

'ಚಾಜ' ನಾಟಕವು ಹದಿನೇಳು ಪಾತ್ರಗಳನ್ನೊಳಗೊಂಡು, ಹನ್ನೊಂದು ದೃಶ್ಯಗಳೊಂದಿಗೆ, ೯೯ ಪುಟಗಳಲ್ಲಿ ತನ್ನ ಕಥಾ ಹಂದರವನ್ನೊಳಗೊಂಡಿದೆ. ದೇಸಾಯಿಗಳ ವಾಡೆಯಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬರುತ್ತಿದ್ದ ಚಾಜದ ಆಚರಣೆಯ ವಿರುದ್ಧ ಬಂಡೆದ್ದ ವಿರೋಧಿ ಬಣದ ನಾಯಕನಾಗಿದ್ದ ರಮೇಶ ಎಂ.ಎಲ್.ಎ ಆಗಿ ಬಂದನು. ನಂತರ ಈ ಕಾರ್ಯವನ್ನು ವಾಡೆಯಿದ ಗೆಸ್ಟ್ ಹೌಸ್‌ನಲ್ಲಿ ಚಾಜ ಮತ್ತು ಮಹಾನವಮಿಯ ಮೇಣದ ಪಲ್ಲಕ್ಕಿಯಲ್ಲಿ ತಾನು ಕುಳಿತುಕೊಳ್ಳುವ ಈ ಪರಂಪರೆಯನ್ನೆ ಮತ್ತೇ ಮುದುವರೆಸುವ ಉದ್ದೇಶಕ್ಕಾಗಿ ಮೇಲ್ಜಾತಿ ಮತ್ತು ಕೆಳಜಾತಿಯ ಪಂಗಡಗಳ ನಡುವೆ ನಡೆಯುವ ಸಂಘರ್ಷವನ್ನು ಹುಟ್ಟುಹಾಕುತ್ತಾನೆ. ಸಮಾಜದ ಮೇಲೆ ಆಗುವ ಅದರ ಪರಿಣಾಮ, ಇದನ್ನು ಗಮನಿಸಿದ ಬಸವಣ್ಣ, ಸಾವಿತ್ರಿ ಮತ್ತು ಕಲ್ಲಿ ಜನರಿಗೆ 'ದೊಡ್ಡವರ ಪ್ರತಿಷ್ಠಿತೆಗಾಗಿ ನಡೆಯುವ ಜಗಳದಲ್ಲಿ ಸಾಯುವವರು ನಮ್ಮಂತ ಸಣ್ಣವರೇ' ಎಂಬ ಸತ್ಯದ ಅರಿವು ಮೂಡಿಸಿ, ಅವರನ್ನು ಸಹಬಾಳ್ವೆಯಿಂದ ಬಾಳುವಂತೆ ಮಾಡುವುದೆ ಈ ನಾಟಕದ ವಸ್ತುವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಹವ್ಯಾಸಿ ನಾಟಕಗಳನ್ನು ಆಡುವ ಪರಂಪರೆಯನ್ನು ನೆನಪಿಸುತ್ತ ಪ್ರಾರಂಭವಾಗುವ ಈ ನಾಟಕವು. ಮುಂದೆ ಬಯಲಾಟ ನಾಟಕಗಳಲ್ಲಿ ಬರುವಂತೆ ಸೂತ್ರಧಾರ ಪಾತ್ರದಿಂದ ನಿಜವಾದ ನಾಟಕ ಆರಂಭವಾಗುತ್ತದೆ. ಸೂತ್ರಧಾರ ಹೇಳುವ ಮಾತುಗಳು ಈಡೀ ನಾಟಕದ ವಸ್ತುವನ್ನು ಪ್ರತಿನಿಧಿಸುತ್ತದೆ. "ಕಾಲಕ್ಕೆ ನಾಲಗೆ ಏನಾದ್ರೂ ಇತ್ತ ಅಂದಿದ್ರ ಎಲ್ಲಾ ನೆಕ್ಕಿ ಸ್ವಚ್ಛ ಮಾಡತಿತ್ತ. ಆದ್ರ ಅದಕ್ಕೆ ಬರೇ ಕಾಲ ಒಂದೇ ಅದಾವು. ಹಿಂಗಾಗಿ ಮನುಷ್ಯಾ ಕಟ್ಟಿದ ಚಕ್ರಾ ನೋಡಕೊಳ್ಳದ ಕಾಲ ಎತ್ತಾಗ ಓಡಾಕ ಹತ್ತಿನೀ, ಯಾಕ ಓಡಾಕ ಹತ್ತೇನಿ, ಅನ್ನೊದು ಗೊತ್ತಿಲ್ಲದ ಓಡೇ ಓಡುತ್ತ ನೋಡು. ಇವತ್ತ ನಮ್ಮೂರ ಅಗಸಿ ಬಾಗಲದಾಗ ಹುಗಿದಿರುವ ಶಿವಲಿಂಗ ಈ ಕಾಲ ಚಕ್ರಾನ್ನ ತರಬೈತಿ" (ಅದೇ, ಪು.೪) ಅನ್ನೋ ಮಾತಲ್ಲಿ "ಅಗಸಿ ಬಾಗಲದಾಗ ಹುಗಿದಿರುವ ಶಿವಲಿಂಗ ಈ ಕಾಲ ಚಕ್ರಾನ್ನ ತರಬೈತಿ" ಎಂಬುದು ಹನ್ನೆರಡನೆಯ ಶತಮಾನದ ಶರಣ ಸಂಸ್ಕೃತಿಯು ವಿಪ್ರ ಸಂಸ್ಕೃತಿಯ ಆಚಾರ ಪರಂಪರೆಯ ಮುಂದುವರೆಕೆಯನ್ನು ವಿರೋಧಿಸಿ, ಜನ ಜಾಗ್ರತಿಯನ್ನು ಮೂಡಿಸಿದ್ದನ್ನು ತಿಳಿಸುತ್ತ, ಗಂಡಿನಂತೆ ಹೆಣ್ಣು ಸಮಾನಳು ಎಂಬ ಧ್ವನಿ ಪ್ರತಿಧ್ವನಿಸುತ್ತದೆ. ಅಧಿಕಾರಸ್ಥ ಜನರು ತಮ್ಮ ತಮ್ಮ ಅನೂಕೂಲಕ್ಕೆ ಆಚಾರ ಪದ್ಧತಿಗಳನ್ನು ಮಾಡಿಕೊಂಡು, ಅವುಗಳನ್ನ ಜನರ ಮೇಲೆ ಬಲವಂತವಾಗಿ ಹೇರಿ ತಮ್ಮ ಕಾರ್ಯ ಸಾಧಿಸಿಕೊಂಡು ಬರುವ ಮಾಯಾ ಜಾಲದಿಂದ ಹೊರಬರಬೇಕು. ಮಾತಿನ ಮಾಯೆಯಿಂದ ನಮ್ಮ ಮನಸ್ಸುಗಳನ್ನು ಜಡವಾಗಿಸಿ, ದೇವರ ಹೆಸರಿನಲ್ಲಿ ನಮ್ಮನ್ನು ಶೋಷಿಸುತ್ತ, ಮನಸ್ಸನ್ನೆ ಬಂಜರು ಮಾಡಿರುವ ಸ್ಥಿತಿಯಿಂದ ಹೊರಬರಬೇಕೆಂಬ ಸಂದೇಶವನ್ನು ಸೂತ್ರಧಾರನ ಮೂಲಕ ನಾಟಕಗಾರ್ತಿಯು ಹೇಳಿಸಿದ್ದು ಸೂಕ್ತವಾಗಿದೆ.

ಹೆಣ್ಣನ್ನೂ ಸಂಪ್ರದಾಯದ ಹೆಸರಿನಲ್ಲಿ ಶೋಷಿಸುತ್ತಿದ್ದ ದೇಸಾಯಿಯ ವಿರುದ್ಧ ಸಿಡಿದೇಳುವ ಸಾವಿಂತ್ರಿ ಸ್ತ್ರೀಸಂವೇದನ ಶೀಲ ಹೆಣ್ಣಾಗಿ ಬಿಂಬಿತಳಾಗಿದ್ದಾಳೆ. ಗಂಡನನ್ನು ಎದುರಿಸಲಾರದ ಹೆಣ್ಣುಗಳ ಪ್ರತೀಕವಾಗಿ ರುದ್ರಮ್ಮ ಚಿತ್ರಿತಳಾಗಿದ್ದಾಳೆ. ಆದರೆ ಇಬ್ಬರೂ ಗೌಡನ ಮಡದಿಯರೇ ಆದರೂ, ಒಬ್ಬಳೂ ಅನಕ್ಷರಸ್ಥ ಸ್ತ್ರೀಯರ ಪ್ರತಿಬಿಂಬವಾದರೆ, ಮತ್ತೊಬ್ಬಳು ಅಕ್ಷರಸ್ಥರ ಮಹಿಳೆಯ ಪ್ರತಿಬಿಂಬವಾಗಿ ಕಾಣುತ್ತಾಳೆ. ಸಾವಿಂತ್ರಿ ಗಂಡನನ್ನೆ ವಿರೋಧಿಸುವಂತೆ "ಕಾಲಕ್ಕೆ ತಕ್ಕಂತೆ ಬದಲಾಗಬೇಕು. ಊರು ಗುತಗಿ ಹಿಡಿಯುವ ಕಾಲ ಅಲ್ಲ ಇದು. ಎಲ್ಲಾರಂಗ ನಾವೂ ಊರಾಗ ಇರಬೇಕು. ಅದು ಬಿಟ್ಟು ಊರನಂದು, ನಾ ಊರ ಆಳಾಕ ಹುಟ್ಟೇನಿ ಅಂದ್ರ ಆಗುದಿಲ್ಲ ಈಗ. ದೇಸಾಯಿ ನೆತ್ತಿಗೇರಿದ ಪಿತ್ತಾ ಇಳಿಯಲಿ ಆಗರ ಬುದ್ಧಿ ಬಂದೀತು." (ಅದೇ ಪು.೧೬) ಎಂದು ಅಕ್ಕ ರುದ್ರಮ್ಮನಿಗೆ ಹೇಳುವ ಮಾತುಗಳು ಪರಂಪರಾಗತವಾಗಿ ಹೆಣ್ಣು ಗಂಡ ಹೇಳಿದಂತೆ ಕೇಳಬೇಕು. ಅವನ ವಿರುದ್ಧ ಮಾತನಾಡಬಾರದೆಂಬ ಸಂಪ್ರದಾಯವನ್ನು ಮುರಿಯುತ್ತಾಳೆ. ಅದಕ್ಕಾಗಿ ಅವಿರಥವಾಗಿ ಗಂಡನ ವಿರುದ್ಧ ಬಂಡಾಯವೆದ್ದು ಮೌಢ್ಯದಿಂದ ಚಾಜದ ಹೆಸರಿನಲ್ಲಿ ದೇಹವನ್ನು ಅರ್ಪಿಸುತ್ತಿದ್ದ ಅಬಲೆಯರನ್ನು ಕಲ್ಲಿಯ ಸಹಾಯದಿಂದ ಪಾರುಮಾಡುತ್ತಾಳೆ. ಶ್ರೀಮಂತಿಕೆಯ ಮದದಿಂದ ಬೀಗುತಿದ್ದ ದೇಸಾಯಿಯ ಪಾಲಿಗೆ ಇವಳೆ ದುರ್ಗಿಯಾಗಿ ತೋರುತ್ತಾಳೆ. ಗಂಡಂದಿರು ತಮ್ಮ ದೈಹಿಕ ಬಲದಿಂದ ಹೆಂಡತಿಯರನ್ನು ಹೆದರಿಸಿ, ಅವರನ್ನು ಹದ್ದು ಬಸ್ತಿನಲ್ಲಿ ಇಟ್ಟುಕೊಳ್ಳುವವನಾಗಿ, ಪರಸ್ತ್ರೀಯರ ಮೇಲೆ ತನ್ನ ಪೌರುಷ ತೋರಿಸುವವನಾದ ದೇಸಾಯಿ ಕಟ್ಟಿಕೊಂಡ ಹೆಂಡತಿಯರಿಗೆ ಸಂಸಾರಸುಖ ನೀಡದವನಾಗುತ್ತಾನೆ. ಮೊದಲ ರಾತ್ರಿಯಲ್ಲಿ ಈ ಸ್ಥಿತಿಯನ್ನು ಅನುಭವಿಸಿದ ರುದ್ರಮ್ಮ ತನ್ನ ಸಂಸಾರ ಸುಖದ ಅಸಹನೆಯನ್ನು ತನ್ನಲ್ಲಿ ಬಚ್ಚಿಟ್ಟುಕೊಂಡಿದ್ದರೂ ಅದನ್ನು ಹೇಳಿಕೊಳ್ಳಲಾಗದ ನೋವನ್ನು ತಿಳಿಸುತ್ತದೆ. ಹೀಗೆ ತನ್ನ ಪೂರ್ವಜರು ಮಾಡಿಕೊಂಡು ಬಂದ ಚಾಜವನ್ನೂ ಉಳಿಸಿಕೊಳ್ಳಬೇಕೆಂಬ ತುಮುಲದಿಂದ ದೇಸಾಯಿ ಬಲವಂತವಾಗಿ ಇದನ್ನು ಆಚರಣೆಯಲ್ಲಿ ಇಡುವ ಪ್ರಯತ್ನ ಮಾಡುತ್ತಾನೆ. ಅದಕ್ಕಾಗಿ ಊರಿನಲ್ಲಿ ಮತ್ತೊಂದು ಬಣ ನಿರ್ಮಾಣವಾಗುತ್ತದೆ.

ರಮೇಶನು ಚಾಜವನ್ನೂ ವೀರೋಧಿಸುತ್ತ ಬಂದವನು. ತಾನು ಜನಪ್ರತಿನಿಧಿಯಾಗಿ ಬಂದನಂತರ ಬಂಡವಾಳಶಾಹಿಯಾಗಿ ಮಾರ್ಪಾಡಾಗುತ್ತಾನೆ. ದೇಸಾಯಿ ನಡೆಸುತ್ತಿದ್ದ ಚಾಜ ಮತ್ತು ಮೇಣದಲ್ಲಿ(ಪಲ್ಲಕ್ಕಿ) ಕುಳಿತು ಬನ್ನಿಮುಡಿಯುವ ಕಾರ್ಯ ಇನ್ನೂ ನನ್ನ ನೆತೃತ್ವದಲ್ಲಿ ನಡೆಯಬೇಕೆಂಬ ಆಸೆ ಅವನಲ್ಲಿ ಅಂಕುರವಾಗುತ್ತಿದ್ದಂತೆ ಗುಂಡಾಗಳ ಸಹಾಯದಿಂದ ಅದನ್ನು

ಬಲವಂತವಾಗಿ ಪಡೆಯುವುದಕ್ಕಾಗಿ ಜನರನ್ನು ಎತ್ತಿಗಟ್ಟುವ ಸಂದರ್ಭಗಳು ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ನಡೆಯುತ್ತಿರುವುದನ್ನು ಕಣ್ಣಮುಂದೆ ತಂದು ನಿಲ್ಲಿಸುತ್ತದೆ. ದೇಸಾಯಿ ಮತ್ತು ರಮೇಶನ ವರ್ತನೆಗಳು ಮಾನವೀಯ ಮೌಲ್ಯಗಳೇ ಇಲ್ಲದ ವ್ಯಕ್ತಿಗಳು ನಡೆದುಕೊಳ್ಳುವ ರೀತಿಯನ್ನು ತೋರಿಸುತ್ತದೆ. ರಮೇಶ ದಲಿತನಾಗಿದ್ದರೂ(ಶೋಷಿತವರ್ಗ) ದಲಿತ ಹೆಣ್ಣು ಮಗಳನ್ನು ಚಾಜಕ್ಕೆ ಕರೆತರುವಂತೆ ಹೇಳುವುದನ್ನು ನೋಡಿದರೆ ಬಂಡಾವಾಳಶಾಹಿ ದಲಿತರಿಂದ ಶೋಷಿತ ದಲಿತರ ಮೇಲಾಗುವ ಪ್ರಹಾರವನ್ನು ಬಿಂಬಿಸುತ್ತದೆ. ತನ್ನ ಸ್ವಾರ್ಥಕ್ಕಾಗಿ ತನ್ನ ಹಿಂಬಾಲಕರಾದ ದಲಿತರನ್ನೆ ಬಲಿಕೊಡುವಷ್ಟು ಕ್ರೌರ್ಯ ಅವನ ಮನದಲ್ಲಿ ಬೆಳೆದು ನಿಂತಿದೆ. ಇದು ಅಪಾಯಕಾರಿ ಎಂಬುದನ್ನು ನಾಟಕಕಾರ್ತಿಯು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಅದೇ, ಈ ನಾಟಕದ ದಲಿತರ ನಾಯಕ ಬಸವಣ್ಣ ಹನ್ನೆರಡನೆ ಶತಮಾನದ ಬಸವಣ್ಣನಂತೆ ಬಿಂಬಿತನಾಗಿದ್ದಾನೆ. ಮಾನವೀಯ ಮೌಲ್ಯಗಳನ್ನೇ ಮೈಗೂಡಿಸಿಕೊಂಡುವವನಾಗಿ ದೇಸಾಯಿ ಮಾಡುವ ಈ ಕಾರ್ಯಗಳನ್ನು ವಿರೋಧಿಸುವಂತೆ, ತಮ್ಮ ಕೋಮಿನ ನಾಯಕನಾದ ರಮೇಶನು ಮಾಡುವ ಕ್ರೌರ್ಯವನ್ನು ಪ್ರತಿರೋಧಿಸುತ್ತಾನೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು ಎಂಬುದನ್ನು ಈ ಪಾತ್ರ ನಿರ್ವಹಿಸುತ್ತದೆ. ಕೊನೆಗೆ ಆತನು ಜಗಳಾಡುತ್ತಿದ್ದ ಇಬ್ಬರ ಕಡೆಯ ಜನರನ್ನು ಉದ್ದೇಶಿಸಿ ಹೇಳುವ ಮಾತುಗಳು ಹೀಗಿವೆ. “ಹೌದು ದೇಸಾಯಿನಿ ಹೇಳಿದ್ದು ಖರೆ ಐತಿ. ಈ ಹೊಡದಾಟದಾಗ ನೀವು ಸಾಯಿತೀರಿ. ನಿಮ್ಮ ಮಕ್ಕಳು ಪರದೇಶಿ ಅಕ್ಕಾರ. ನಿಮ್ಮ ಹೆಂಡ್ರು ರಂಡಿ ಮುಂಡೇರಾಗಿ ದೇಸಾಯಿಯಂತವರಿಗೆ, ರಮೇಶನಂತವ್ರಿಗೆ ಬಲಿಯಾಕ್ಕರ. ಕೋರ್ಟು ಕಚೇರಿ ಅಂತ ಇದ್ದಬಿದ್ದ ಹೋಲಾಮನಿ ಮಾರಕೊಂಡ ಹೊಟ್ಟಿ ತುಂಬಿಸಿಕೊಳ್ಳಾಕ ಗುಳೆ ಹೊಕ್ಕಿರಿ. ನಿಮ್ಮ ನಂಬಿದ ತಂದೆ-ತಾಯಿಗಳಿಗೆ ಏನ ಹೇಳತೀರಿ.” (ಅದೇ ಪು.೧೧) ಎನ್ನುತ್ತಾ, ‘ದೇವರನ್ನು ಸೃಷ್ಟಿಸಿದವರು ನಾವು, ದೇವರೇ ಇಲ್ಲ, ಈ ಪದ್ಧತಿಗಳು ಮಾನವನ ಸೃಷ್ಟಿ, ದೇವರ ಮಕ್ಕಳ ನಾವು ಹಸಿವಿನಿಂದ ಬಳಲೋದು ಯಾಕೆ ?. ಪುರೋಹಿತರು, ಪುಜಾರಿಗಳು ತಮ್ಮ ಸ್ವಾರ್ಥಕ್ಕೆ ಹುಟ್ಟು ಹಾಕಿದ ಪದ್ಧತಿಗಳಿಗೆ ನಾವು ಬಲಿಯಾಗುತ್ತಿದ್ದೇವೆ. ನಮ್ಮ ಕೇರ್‍ಯಾನ ದುರಗವ್ವ, ಊರಹೊರಗಿನ ಹನುಮಪ್ಪ ಏನು ಪಾಪ ಮಾಡಿದಾರ, ಹಾರೂರ ದೇವರ ಮ್ಯಾಲ ಬಂಗಾರ ಬೆಳ್ಳಿ ಹೇರಿಕೊಂಡಾವ, ಸುಳ್ಳನ್ನು ಚಂದ ಹೇಳ್ತಬಂದೋರು ಮ್ಯಾಲಕ್ಕ ಹೋದ್ರು, ನಂಬಿಕೊಂಡ ನಾವು ನೆಲದಾನ ಹುಳುವಾದ್ವಿ’ ಎಂಬಲ್ಲಿ ಮೇಲ್ಜಾತಿಯವರಿಂದ ಹುಟ್ಟಿಕೊಂಡ ಪುರಾಣ ಕಥೆಗಳಿಗೆ ಮಾರುಹೋದ ನಾವೂ ಧರ್ಮದ ಹೆಸರಿನಲ್ಲಿ ಸ್ವಂತ ವಿಚಾರ ಮಾಡುವುದನ್ನೇ ಕಳೆದುಕೊಂಡ ನೋವು ಎದ್ದು ಕಾಣುತ್ತದೆ. ಅದನ್ನು ವಿರೋಧಿಸುವುದಕ್ಕಾಗಿ ನಮಗೆ ವೈಚಾರಿಕತೆಯ ಪ್ರಜ್ಞೆ ಅವಶ್ಯಕ ಎಂಬುದನ್ನು ಡಾ. ಮಲ್ಲಿಕಾ ಘಂಟಿಯವರು ಸಾಮಾಜಿಕ ಕಳಕಳಿಯ ಹಿನ್ನೆಲೆಯಲ್ಲಿ ಹೇಳುತ್ತಾರೆ. ಜಗಳ ಹಚ್ಚಿದವರು ಬೆಚ್ಚನೆಯ ಮನೆಯಲ್ಲಿ ಮಜಾ ಮಾಡುತ್ತ ಕುಳಿತಿರುತ್ತಾರೆ. ಇಬ್ಬರು ನಾಯಕರ ಮೇಲಿನ ಅತಿಯಾದ ಅಭಿಮಾನದಲ್ಲಿ ಬಲಿಯಾಗುವುದು ನಮ್ಮಂತ ಬಡವರೆ. ಹಾಗಾಗಿ ನಾವು ಎಚ್ಚೆತ್ತುಕೊಳ್ಳಬೇಕು. ಅದಕ್ಕೆ ಅಕ್ಷರ ಜ್ಞಾನವೂ ಬಹಳ ಮುಖ್ಯ, ಅಕ್ಷರ ಜ್ಞಾನದ ಜೊತೆಗೆ ವೈಚಾರಿಕ ಚಿಂತನೆಯೂ ಬೇಕು, ಇವೆರಡರ ಜೊತೆಗೆ ಸಹಬಾಳ್ವೆಯ ಮನಸ್ಸೂ ಬೇಕು ಎಂಬ ಸಂದೇಶವನ್ನು ಸಾರುತ್ತ ನಾಟಕ ಮುಗಿಯುತ್ತದೆ. ಒಟ್ಟಿನಲ್ಲಿ ನಾಟಕ ಅಧಿಕಾರಸ್ಥರಿಂದ ಅಧಿಕಾರ ಹೀನರ ಮೇಲೆ ನಡೆಯುವ ದಬ್ಬಾಳಿಕೆಯನ್ನು ಎತ್ತಿತೋರುತ್ತದೆ. ಹಾಗಾಗಿ ನಾಟಕದ ಆಂತರಿಕ ಸೌಂದರ್ಯ ಅಡಗಿರುವುದು ನಾಟಕದ ವಸ್ತುವಿನ ಆಯ್ಕೆ, ರಚನಾತಂತ್ರ ಮತ್ತು ನಿರೂಪಣಾ ಶೈಲಿಯಲ್ಲಿ ಎಂಬುದನ್ನು ಗುರುತಿಸಬಹುದು. ಒಟ್ಟಾರೆಯಾಗಿ ಈ ನಾಟಕವು ಪ್ರಸ್ತುತ ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಪ್ರಶ್ನಿಸುವಂತಿದೆ.

**ಒಂದು ಬಾವಿಯ ಕಥೆ**

ಡಾ. ಘಂಟಿ ಅವರ ಎರಡನೆಯ ನಾಟಕವಿದು. ಸ್ವಾತಂತ್ರಾನಂತರವೂ ಗ್ರಾಮೀಣ ಪ್ರದೇಶದಲ್ಲಿ ದಲಿತರು ಅನುಭವಿಸುತ್ತಿರುವ ಅಸ್ಪೃಶ್ಯತೆ ಜೀವಂತವಾಗಿರುವುದನ್ನು ಎತ್ತಿ ತೋರಿಸುವ ನಾಟಕವಿದು. ಒಂದು ಹನಿ ನೀರಿಗಾಗಿ ದಲಿತರು ಮೇಲ್ಜಾತಿಯವರಿಂದ ಅನುಭವಿಸುತ್ತಿರುವ ನೋವಿನ ಕಥಾವಸ್ತುವನ್ನೊಳಗೊಂಡದೆ. ಈ ನಾಟಕದಲ್ಲಿ ಕರಿಯವ್ವ ಒಂದು ಸೇರೆ ನೀರಿಗಾಗಿ ಊರ ಬಾವಿಯ ಮುಂದೆ ದಿನಗಟ್ಟಲೇ ಕಾದರೂ ಒಂದು ಕೊಡ ನೀರು ಹಣಿಸಲು ಮುಂದಾಗದೆ ಮೇಲ್ಜಾತಿಯವರು ತಮ್ಮ ತಮ್ಮ ಕಾರ್ಯದ ನೆಪವನ್ನು ಹೇಳುತ್ತಾರೆ. ಹುಟ್ಟಿದ ಸೂರ್ಯ ನೆತ್ತಿಗೆ ಬಂದರೂ ಒಂದು ಕೊಡ ನೀರು ಸಿಗುವುದಿಲ್ಲ. ಆದರೆ ಜಾತಿ ವಿನಾಶಕ್ಕಾಗಿ ಉಪದೇಶಗಳನ್ನು ಮಾಡುತ್ತ ಮಾಸ್ತರರು ತನ್ನ ಇಡೀ ಜೀವನವನ್ನು ಗಾಂಧೀ ತತ್ವದಲ್ಲಿಯೇ ಕಳೆಯುತ್ತಾರೆ. ಗಾಂಧೀಜಿಯ ಕನಸು, ಅವರ ಶಾಂತಿತತ್ವ ಮಾತ್ರ ದಲಿತರನ್ನು ಉದ್ಧರಿಸುವುದಿಲ್ಲ. ತಿಪ್ಪನು ಶಿಕ್ಷಣವಂತನಾಗಿದ್ದ ಅದೇ ಊರಿನ ದಲಿತರ ಹುಡುಗ. ಇವನು ಮಾತ್ರ ಅಸ್ಪೃಶ್ಯತೆಯ ವಿರುದ್ಧ ಹೋರಾಡುವ ಮನೋಭಾವ ಹೊಂದಿದ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ. ತನ್ನ ಜನಗಳಿಗೆ ಸಿಗಬೇಕಾದ ಮೂಲಸೌಲಭ್ಯಗಳನ್ನು ಕೊಡಿಸುವುದಕ್ಕಾಗಿ ಕಾನೂನಿನ ಮೊರೆಹೋಗುತ್ತಾನೆ. ಆದರೆ ಅದು ಫಲ ನೀಡದಿದ್ದಾಗ ಹೋರಾಟದ ಹಾದಿಯೊಂದೇ ಇದಕ್ಕೆ ಸೂಕ್ತ ಮಾರ್ಗವೆಂಬ ನಿರ್ಧಾರಕ್ಕೆ ಬರುತ್ತಾನೆ. ಇದು ಈ ನಾಟಕದ ಕಥಾವಸ್ತು.

‘ಒಂದು ಬಾವಿಯ ಸುತ್ತ’ ನಾಟಕದಲ್ಲಿ ಹೇಳುವಂತೆ ದಲಿತರ ಬದುಕಿನ ಸ್ಥಿತಿ ಈಗಲೂ ಇದೆ. ದಲಿತರು ಮಾತ್ರ ಇಂಥ ನೋವಿನಿಂದ ಹೊರಬರಲಾಗದೇ ಒದ್ದಾಡುವ ಪರಿಸ್ಥಿತಿ ಮಾತ್ರ ಬದಲಾಗಿಲ್ಲ ಎಂಬುದನ್ನು ಈ ನಾಟಕವು ಅಭಿವ್ಯಕ್ತಿಸುತ್ತದೆ. ಅಲ್ಲದೆ ಕೆಳವರ್ಗದವರಿಗಾಗಿಯೇ ನೀರಿನ ಬಾವಿಗಳು ಪ್ರತ್ಯೆಕವಾಗಿರುತ್ತಿದ್ದವು. “ಬಂದೊರೆಲ್ಲ ಹಿಂಗ ಅನ್ನಾಕ ಹತ್ಯಾರ್ರಿ, ದೌವ್ವಳರಿಗೆ ಒಂದು ಮಗೀ ನೀರ ಹಾಕರಿ ಅಂತ ಕೇಳದರ ಎಟೊಂದ ಮಾತಡತಾರ್ರಿ ನಮ್ಮಂಥವರಿಗೆ ಆ ನಾಯಿ ನರಿ ಸತ್ತ ಬಿದ್ದ ಬಾವಿ ನೀರ ಗತಿ ಬಿಡಿರಿ.” (ದೃಶ್ಯ-೨) ಎಂಬ ಕರಿಯವ್ವನ ಮಾತುಗಳು ಇದಕ್ಕೆ ಸಾಕ್ಷಿಯಾದಂತಿವೆ. ಎಷ್ಟು ಗೋಗರೆದರೂ ಕೊನೆಗೂ ನೀರು ಸಿಕ್ಕುವುದೇ ಇಲ್ಲ. ಪ್ರಾಕೃತಿಕವಾಗಿ ಸಿಗುವ ನೀರಿನ ಮೇಲೆ ಧರ್ಮದ ಹೆಸರಿನಲ್ಲಿ ನಿರ್ಬಂಧಗಳನ್ನು ಹೆರುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ನಾಟಕಕಾರ್ತಿಯದು. ಇಲ್ಲಿ ದಲಿತರ ಮೇಲೆ ಇರುವ ಕಾಳಜಿಯ ಮನೋ ತುಡಿತ ಎದ್ದು ಕಾಣುತ್ತದೆ.

ಗಾಂಧೀ ವಾದಗಳು ಪ್ರಸ್ತುತ ಸಮಾಜಕ್ಕೆ ಅಪ್ರಸ್ತುತವೆನಿಸುತ್ತವೆ. ಏಕೆಂದರೆ, ಇಂದಿನ ಸಮಾಜದಲ್ಲಿ ಒಂದು ಕೆನ್ನೆಗೆ ಹೊಡೆದರೆ ಮತ್ತೊಂದು ಕೆನ್ನೆ ತೋರಿಸುವ ಕಾಲವಿದಲ್ಲ. ಶಾಂತಿಯಿಂದ ಏನನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ನಾಟಕಕಾರ್ತಿಯು ಹೇಳಹೊರಟಂತಿದೆ. ಮಾಸ್ತರರು ಮಾತ್ರ ಆ ಊರಿನಲ್ಲಿ ಗಾಂಧೀ ತತ್ವವನ್ನು ಪಾಲಿಸುತ್ತಿರುತ್ತಾರೆ. ಅವರು ಸಾಬರಮತಿ ಆಶ್ರಮದಲ್ಲಿದ್ದುದರಿಂದ ಅವರ ಮೇಲೆ ಗಾಂಧೀಜಿಯವರ ಪ್ರಭಾವವಾಗಿರುತ್ತದೆ. ಅದನ್ನೇ ತನ್ನ ಜೀವನದುದ್ದಕ್ಕೂ ಅನುಸರಿಸುತ್ತ ಬಂದಿರುತ್ತಾರೆ. ಅವರು ಶಾಂತಿ, ಸಮಾನತೆಯನ್ನು ಸಾರುವ ಪಾತ್ರವಾಗಿ ಇಲ್ಲಿ ಚಿತ್ರಿತವಾಗಿದ್ದಾರೆ. ಆದರೆ ಬೇರೊಬ್ಬರಿಗೆ ನಮ್ಮಿಂದ ಉಪಯೋಗವಾಗುತ್ತದೆ ಎಂದಾಗ ಈ ತತ್ವಗಳು ಅವುಗಳ ಪಾಲನೆ ಮಾಡುವ ಸ್ಥಿತಿ ಕಂಡುಬರುತ್ತದೆ. ಕಾಲ ಬದಲಾಗಿದೆ ಎಂದ

ದುರಗಪ್ಪನ ಮಾತಿಗೆ ಮಾಸ್ತರರು ಹೀಗೆ ಹೇಳುತ್ತಾರೆ; "ದುರಗಪ್ಪ ನೀ ಹೇಳುದ ಖರೇವ ಅದಪ ನನಗ ಕೈ ತುಂಬ ಪಗಾರ ಬರುಮುಂದ ನನ್ನ ಮಕ್ಕಳೆಲ್ಲಾ ನಾ ನಿಂತ್ರ, ಕುಂತ್ರ ಕಾಳಜಿ ಮಾಡತಿದ್ರು ಮತ್ತೆ ನನ್ನ ಗಾಂಧೀ ತತ್ವಾನು ಪಾಲಸತಿದ್ರು ಆದ್ರ ಇಂದ ನನ್ನ ಗತಿ. ನನಗ ಫೆನ್‌ಶನ್ ಆದ ಮ್ಯಾಲೆ ನಾನು ನನ್ನ ಗಾಂಧೀ ಕೂಡ ಮೂಲೆ ಗುಂಪಾಗೆವಪಾ ಈಗ ನಾವಿಬ್ಬರೂ ಕೊಟ್ಟಿ ನಾಣ್ಯಪಾ ಕೊಟ್ಟಿ ನಾಣ್ಯ" (ದೃಶ್ಯ-೩) ಎನ್ನುತ್ತಾರೆ. ಅಲ್ಲದೆ ಸತ್ಯವಂತರಿಗೆ ಇದು ಕಾಲವಲ್ಲ ಎಂಬುದನ್ನು ನಾಟಕಕಾರ್ತಿಯು ಈ ಮೂಲಕ ಸೂಚ್ಯವಾಗಿಯೇ ಹೇಳುತ್ತಾರೆ. ಹಾಗೆಯೆ ಇಂದು ಗ್ರಾಮೀಣ ಪಂಚಾಯತಿಗಳು ಸಹಿತ ಬದಲಾವಣೆಯಾಗಿರುವುದನ್ನು ಈ ನಾಟಕ ತಿಳಿಸುತ್ತದೆ. ಅದೇ 'ತಿಪ್ಪ' ಎಂಬವನು ಗಾಂಧೀ ತತ್ವಕ್ಕೆ ವಿರುದ್ಧವಾದ ಯೋಜನೆಯುಳ್ಳ ಪಾತ್ರವಾಗಿ ಸೃಷ್ಟಿಸಿದ್ದಾರೆ.

ತಿಪ್ಪನು ಸುಸಜ್ಜಿತವಾದ ಗೋವಾ ನಗರಕ್ಕೆ ದುಡಿಯಲು ಹೋಗಿದ್ದ ಅದೇ ಊರಿನ ದಲಿತರ ಹುಡುಗ. ಇವನು ಗೋವಾದಂತ ನಗರದಲ್ಲಿ ಬೆಳೆದವನಾಗಿದ್ದರಿಂದ ಅವನಲ್ಲಿ ಹಳ್ಳಿಯ ಬದುಕಿನ ಈ ಧಾರುಣ ಚಿತ್ರಣ, ಇಲ್ಲಿ ದಲಿತರರಿಗಿರುವ ನಿರ್ಬಂಧಗಳು ಅವನಲ್ಲಿ ಹೋರಾಟದ ಮನೋಭಾವ ಮೂಡುವಂತೆ ಮಾಡುತ್ತದೆ. ಅದಕ್ಕಾಗಿಯೇ ಬಾವಿಯ ನೀರನ್ನು ದಲಿತರು ಬಳಸುವಂತಾಗಬೇಕೆಂಬ ಕಾರಣಕ್ಕಾಗಿ ಪಂಚಾಯತಿ, ಪೋಲಿಸ್ಟೇಷನ್ ಮೆಟ್ಟಿಲನ್ನೂ ಏರುತ್ತಾನೆ. ಅದರಿಂದ ಬಾವಿಯ ನೀರನ್ನು ಬಳಸಲು ಅವಕಾಶ ದೊರಕಿತು ನಿಜ. ಆದರೆ ಮೇಲ್ಜಾತಿಯವರೆಲ್ಲ ಸೇರಿಕೊಂಡು ಕೆಳಜಾತಿಯರಿಗೆ ನಿತ್ಯದ ಕೂಲಿ ಕೆಲಸ ಸಂಚುಕಾರ ತರುತ್ತಾರೆ, ಸತ್ತ ಪ್ರಾಣಿಗಳನ್ನು ಅವರಿಗೆ ಕೊಡದಂತೆ ನಿರ್ಬಂಧವನ್ನು ಹಾಕುತ್ತಾರೆ. ಇದರಿಂದಾಗಿ ತಮ್ಮ ಜಾತಿಯವರಿಂದಲೇ ಅವಮಾನಕ್ಕೊಳಗಾಗಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಅದಕ್ಕಾಗಿ ತಿಪ್ಪನು ಹೋರಾಟ, ಹಿಂಸಾಮಾರ್ಗದಿಂದ ರಕ್ತವನ್ನು ಹರಿಸಿಯಾದರೂ ಸರಿ ತಮಗೆ ಸಿಗಬೇಕಾದ ಸ್ಥಾನಮಾನಗಳನ್ನು ಪಡೆಯಬೇಕೆಂಬುದು ತಿಪ್ಪನ ನಿರ್ಧಾರ. ಹೀಗಾಗಿ ಗುರು ಶಿಷ್ಯರ ನಡೆವೆ ವೈರುಧ್ಯತೆಗಳು ಸಾಮಾನ್ಯವಾಗಿಯೇ ಕಂಡುಬರುತ್ತವೆ. ಊರಿನವರು ಮಾತ್ರ ತಮ್ಮ ಧರ್ಮ, ಧಾರ್ಮಿಕ ನಿರ್ಬಂಧನಗಳಲ್ಲೇ ದಲಿತರು ಜೀವನ ನಡೆಸಬೇಕೆಂಬ ಒತ್ತಾಸೆಯಿರುವುದನ್ನು ಈ ನಾಟಕವು ಬಿಂಬಿಸುತ್ತದೆ.

ದಲಿತರ ಹೋರಾಟಗಳು ನೇರವಾಗಿ ಕಾನೂನಾತ್ಮಕವಾಗಿದ್ದರೆ, ಮೇಲ್ವಕ್ತಿಯ ಜನರ ಹೋರಾಟಗಳಲ್ಲಿ ಮೋಸ, ವಂಚನೆ, ಮಾನಸಿಕ ಹಿಂಸೆಯ ಸ್ವರೂಪದಲ್ಲಿರುವುದನ್ನು ಗುರುತಿಸಬಹುದು. ನೀರಿಗಾಗಿ ಕಾನೂನು ಹೋರಾಟ ಮಾಡಿ, ಬಾವಿಯ ನೀರನ್ನು ದಲಿತರು ಬಸಳಸಲು ಅವಕಾಶ ಮಾಡಿಕೊಟ್ಟ ತಿಪ್ಪನ ವಿರುದ್ಧ ಮಾನಸಿಕವಾಗಿ ಅವರ ಜನಾಂಗದ ಮೇಲೆ ದಾಳಿ ಮಾಡುವ ಪ್ರಸಂಗಗಳಿವೆ. ಊರಿನ ಮೇಲ್ವರ್ಗದವರೆಲ್ಲರು ಸೇರಿ ಅವರಿಗೆ ಕೂಲಿಯಿಂದ ಸಿಗಬೇಕಾದ ಒಪ್ಪತ್ತಿನ ಗಂಜಿಯೂ ಸಿಗದಂತೆ ಮಾಡುತ್ತಾರೆ. ಇದರಿಂದಾಗಿ ಅವನು ಯಾರಿಗೋಸ್ಕರ ಹೋರಾಡಿದ್ದನೊ ಅವರಿಂದಲೇ ಅವಮಾನ ಎದುರಿಸುವ ಪ್ರಸಂಗಗಳು ಎದುರಾಗುತ್ತವೆ. ಇವರಿಗೆ ಯಾವುದೇ ರೀತಿಯಿಂದಲೂ ಸೌಲಭ್ಯಗಳು ದೊರಕದಂತಹ ವ್ಯವಸ್ಥೆಯನ್ನು ಊರಿನ ಗೌಡ, ಶೆಟ್ಟಿ, ಸ್ವಾಮಿ, ಕುಲಕರ್ಣಿ ಮತ್ತು ಅವರ ಆಳುಗಳು ಮಾಡುತ್ತಾರೆ.

ದಲಿತರು ಸ್ವಂತ ದುಡಿಯಲು ಸರ್ಕಾರಗಳು ಹಲವಾರು ಯೋಜನೆಗಳಿದ್ದರೂ ಅದರ ಲಾಭವನ್ನು ಊರಿನ ಜಮೀನ್ದಾರರಿಗೆ ಮತ್ತು ಶ್ರೀಮಂತರಿಗೆ ಮಾತ್ರ ಲಭ್ಯವಾಗುವಂತೆ ಬ್ಯಾಂಕುಗಳು ವ್ಯವಸ್ಥೆಯನ್ನು ಮಾಡುತ್ತವೆ. ಬ್ಯಾಂಕುಗಳು ವ್ಯಾಪಾರಿ ಮನೋಭಾವವನ್ನು ಹೊಂದಿದವುಗಳು ಎಂಬುದನ್ನು ಡಾ. ಘಂಟಿಯವರು ಸೂಚ್ಯವಾಗಿಯೇ ಹೇಳುತ್ತಾರೆ. ಮಾಸ್ತರರು ತಿಪ್ಪನು ಸ್ವಂತ ದುಡಿಮೆ ಮಾಡಲೆಂಬ ಆಸೆಯಿಂದ ಬ್ಯಾಂಕಿನಲ್ಲಿ ಸಾಲ ಕೇಳಲು ಬಂದಾಗ ಮ್ಯಾನೇಜರು ಬಡವರಿಗೆ ಸಾಲ ಕೊಡವುದಕ್ಕಾಗಿ ನಾಲ್ಕಾರು ಜನರ ಸಹಿ ಮತ್ತು ಜಮೀನು ಇರಬೇಕು ಎಂಬ ನಿರ್ಬಂಧನಗಳಿರುವುದಾಗಿ ಹೇಳುತ್ತಾನೆ. ಆದರೆ ಅದೇ ಆ ಊರಿನ ಗೌಡನಿಗೆ ಫ್ಯಾಕ್ಟರಿ ಕಟ್ಟಲು ಲಕ್ಷಗಟ್ಟಲೇ ಸಾಲವನ್ನು ಮಂಜೂರು ಮಾಡಿರುತ್ತಾನೆ. ಅಂದರೆ ಗೌಡನು ಕೊಡುವ ಕಮೀಷನನ್ನಿನ ಆಸೆಗಾಗಿ ಮ್ಯಾನೇಜರು ಇಂಥ ಶ್ರೀಮಂತರಿಗೆ ಅನೂಕೂಲ ಮಾಡಿಕೊಡುತ್ತಾನೆ. ಆದರೆ ಅದೇ ಸ್ವಾಭಿಮಾನದಿಂದ ದುಡಿಯಬೇಕೆಂಬ ತಿಪ್ಪನಂತವರಿಗೆ ಈ ಬ್ಯಾಂಕ ಮ್ಯಾನೇಜರುಗಳು ಸಾಲ ಮಂಜೂರಿಗೆ ನೂರೆಂಟೂ ನಿಬಂಧನೆಗಳನ್ನು ಹಾಕುವುದು, ಅದಕ್ಕಾಗಿ ತಿಪ್ಪನು ಮಾಸ್ತರರಿಗೆ ಕ್ರಾಂತಿಯಿಂದಲೇ ಎಲ್ಲವನ್ನು ಪಡೆಯುವುದಾಗಿ ಹೇಳುವುದು ಇವೆಲ್ಲವನ್ನು ನೋಡಿದರೆ, ನಾಟಕಗಾರ್ತಿಯು ಸರ್ಕಾರದ ಸೌಲಭ್ಯಗಳನ್ನು ಮುಟ್ಟಿಸುವಲ್ಲಿಯೂ ಬ್ಯಾಂಕುಗಳು ಮೋಸ ಮಾಡುತ್ತಿರುವುದನ್ನು ಬಹಿರಂಗವಾಗಿಯೇ ವಿರೋಧಿಸಿದಂತಿದೆ. ಇದರಿಂದ ಸರ್ಕಾರದ ಸೌಲಭ್ಯಗಳು ಬಡವರಿಗೆ ಸರಿಯಾಗಿ ಮುಟ್ಟುವುದಿಲ್ಲ ಎಂಬ ಕೊರಗು ಇದೆ. ಸರ್ಕಾರ ರೂಪಿಸಿದ ಕಾಯ್ದೆ ಕಾನೂನುಗಳು ಕೇವಲ ಹಾಳೆಯಲ್ಲಿ ಇರುತ್ತವೆಯೇ ಹೊರತು, ಅವುಗಳು ಬಳಕೆ ಸಮರ್ಪಕವಾಗಿ ಆಗುವುದಿಲ್ಲವೆಂಬ ನೋವು ಇದೆ. ಮೇಲ್ವವರ್ಗದ ಜನರು ಪೋಲಿಸರ ಮುಂದೆ ನಡೆದುಕೊಳ್ಳುವುದನ್ನು ನೋಡಿದರೆ, ದಲಿತರ ಮೇಲೆ ಅವರಿಗಿದ್ದ ಕಾಳಜಿ ಸುಳ್ಳು ಎನಿಸುತ್ತದೆ. ಬಡವರ ಮೇಲೆ ಇರುವ ಕಾಳಜಿ ಹಿಂದೆ ದುರುದ್ದೇಶಗಳೇ ಇರುತ್ತವೆ. ಇದೊಂದು ಮೊಸಳೆ ಕಣ್ಣೀರಿನ ಕಥೆಯಂತೆ ಕಾಣುತ್ತದೆ. ಅಂತಿಮವಾಗಿ ನಾಟಕವು ಹೋರಾಟದ ಹಾದಿಯನ್ನು ತುಳಿಯುತ್ತದೆ. ಆದರೆ ಅದರ ಚಿತ್ರಣವಿಲ್ಲಿಲ್ಲ.

ಒಟ್ಟಾರೆಯಾಗಿ ದಲಿತರು ಇಂಥ ಕಷ್ಟಗಳನ್ನು ಅನಾದಿ ಕಾಲದಿಂದಲೂ ಅನುಭವಿಸುತ್ತ ಬಂದಿರುವುದನ್ನು ನಾವು ಇತಿಹಾಸವಲೋಕನದಿಂದ ಕಾಣಬಹುದು. ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರರಂಥ ಮಹಾನ್ ಮೇಧಾವಿಗಳು ಇಂಥ ವ್ಯವಸ್ಥೆಯ ವಿರುದ್ಧವಾಗಿಯೇ ಹೋರಾಟಗಳನ್ನು ಮಾಡುವುದಷ್ಟೇ ಅಲ್ಲ. ಅದರ ನಿರ್ಮೂಲನೆಗಾಗಿಯೇ ಅವಿರಥವಾಗಿಯೇ ದುಡಿದರು. ಅದರ ಫಲಿತಾಂಶ ಮಾತ್ರ ಶೂನ್ಯವಾಗಿಯೇ ಇದೆ. ಸಾವಿರ ಶತಮಾನ ಕಳೆದರು ಜಾತಿವ್ಯವಸ್ಥೆ ಮಾತ್ರ ಬದಲಾಗುವುದೇ ಇಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಇಡೀ ನಾಟಕವನ್ನು ಅವಲೋಕಿಸಿದಾಗ ನಮಗೆ ಡಾ. ಮಲ್ಲಿಕಾ ಘಂಟಿಯವರು ಈ ನಾಟಕದ ಮೂಲಕ ಸಮಾಜಕ್ಕೆ ಹೇಳಹೊರಟಿರುವ ಸಂದೇಶವೆಂದರೆ, ಮಾನವ ಜನ್ಮ ಎಲ್ಲರಿಗೂ ಸಮಾನವಾದದ್ದು, ಅದರಲ್ಲಿ ಯಾವುದೇ ಬೇಧವಿಲ್ಲ. ಪಾಕೃತಿಕವಾಗಿ ಇರುವ ವಸ್ತುಗಳ ಮೇಲೆನ ನಿರ್ಬಂದಗಳು ಸಲ್ಲವು, ದಲಿತರು ಎಲ್ಲಿಯವರೆಗೂ ತಲೆಬಾಗಿ ನಡೆಯುತ್ತಾರೋ ಅಲ್ಲಿಯವರೆಗೂ ಅವಮಾನಗಳನ್ನು ಎದುರಿಸಬೇಕಾಗುತ್ತದೆ. ಅದೇ ಎದೆ ಸೆಟೆದು ನಿಂತರೆ ಎಲ್ಲವನ್ನು ಸಲಿಸಾಗಿಯೇ ಪಡೆಯಬಹುದು. ಮೂಲಸೌಕರ್ಯಗಳನ್ನು ಪಡೆಯುವುದಕ್ಕಾಗಿ ನಾವು ಹೋರಾಟ ಮಾಡಬೇಕಾದ ಅನಿವಾರ್ಯತೆಯೂ ನಮ್ಮಲ್ಲಿದೆ ಎಂಬ ಅವರೊಳಗಿನ ಮನದ ನೋವಿನ ವ್ಯಥೆ ಅರಿವಾಗುತ್ತದೆ. ಉತ್ತರ ಕರ್ನಾಟಕದ ಭಾಷೆಯಲ್ಲಿ ರಚಿತವಾದ ಈ ನಾಟಕ ಒಂದು ಗ್ರಾಮದೊಳಗೆ ನಡೆಯುವ ಚಿತ್ರಣವನ್ನು ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. ಅಲ್ಲದೆ ಇದು ಏಕಾಂಕ ನಾಟಕದ ಸ್ವರೂಪದಲ್ಲಿದ್ದು, ಐದು ದೃಶ್ಯಗಳನ್ನು ಹೊಂದಿದೆ. ಇಟ್ಟಾರೆಯಾಗಿ ಹೇಳುವುದಾದರೆ ನಾಟಕ ತುಂಬಾ ಚೆನ್ನಾಗಿ ಮೂಡಿಬಂದಿದೆ.